ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

**ಸಂಖ್ಯೆ : ಸಂಖ್ಯೆ : ಸಿ5(2)ಪವ್ಯ.ಬ.12/2019-20** ದಿನಾಂಕ:15-05-2020

**ಅಧಿಸೂಚನೆ**

ವಿಷಯ :- ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀಕ್ಷಕರುಗಳಿಗೆ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರು (ಬೋಧಕೇತರ)ಹುದ್ದೆಗೆ ಪದೋನ್ನತಿ ನೀಡುವ ಕುರಿತು.

ಉಲ್ಲೇಖ :- ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 12 ಎಸ್‌ಡಿಇ 2005 ದಿನಾಂಕ: 29-01-2008.

2 :- ಸರ್ಕಾರದ ಆದೇಶ ಸಂಖ್ಯೆ : ಇಡಿ 464 ಡಿಪಿಐ 2008 ದಿ : 06-01-2009.

3 :- ದಿನಾಂಕ : 09-10-2019 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭಾ ನಡವಳಿಗಳು.

4.:- ಈ ಕಛೇರಿಯ ಅಧಿಸೂಚನೆ ಪತ್ರದ ಸಮ ಸಂಖ್ಯೆ: ದಿನಾಂಕ:16-10-2019 ಮತ್ತು 02-11-2019.

5:- ದಿನಾಂಕ:04-05-2020 ರಂದು ನಡೆದ ಸ್ಥಳ ಆಯ್ಕೆಯ ಕೌನ್ಸಿಲಿಂಗ್.

* * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಗ್ರೂಪ್ 'ಬಿ' ವೃಂದದ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು[ಬೋಧಕೇತರ] ವೃಂದಕ್ಕೆ ಉಲ್ಲೇಖಿತ (1) ರ ಸರ್ಕಾರದ ಆದೇಶದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರನ್ನು ನೇಮಕಾತಿ ಪ್ರಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ಗ್ರೂಪ್ 'ಬಿ' ವೃಂದದ ಹುದ್ದೆಗಳಿಗೆ ಬಡ್ತಿಯನ್ನು ನೀಡುವ ಸಲುವಾಗಿ ಆಯುಕ್ತಾಲಯವಾರು ಇಲಾಖಾ ಮುಂಬಡ್ತಿ ಸಮಿತಿಯನ್ನು ಉಲ್ಲೇಖಿತ (2) ರ ಸರ್ಕಾರದ ಆದೇಶದಲ್ಲಿ ರಚಿಸಿ ಆದೇಶಿಸಲಾಗಿದೆ. ಅದರಂತೆ, ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಪತ್ರಾಂಕಿತ ವ್ಯವಸ್ಥಾಪಕರ / ಸಹಾಯಕ ನಿರ್ದೇಶಕರು (ಬೋಧಕೇತರ) ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅಧೀಕ್ಷಕರ ಹುದ್ದೆಯಿಂದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ದಿನಾಂಕ:09-10-2019 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಂಬಡ್ತಿಯ ಸಭೆಯನ್ನು ನಡೆಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್ 'ಸಿ' ವೃಂದದ ವೇತನ ಶ್ರೇಣಿ ರೂ. 37900-70850 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳಿಗೆ ಗ್ರೂಪ್ 'ಬಿ' ವೃಂದದ ವೇತನ ಶ್ರೇಣಿ ರೂ. 40900-78200 ರ ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರು(ಬೋಧಕೇತರ) ಹುದ್ದೆಗಳಿಗೆ ಉಲ್ಲೇಖ [4] ರ ಅಧಿಸೂಚನೆ ದಿನಾಂಕ:16-10-2019 ರಲ್ಲಿ ಒಟ್ಟು 64 ನೌಕರರಿಗೆ ಮತ್ತು ದಿನಾಂಕ::02-11-2019 ರಂದು 19 ನೌಕರರಿಗೆ ಸ್ಥಾನಪನ್ನ ಬಡ್ತಿಯನ್ನು ನೀಡಿ ಆದೇಶಿಸಲಾಗಿದೆ.

ದಿನಾಂಕ: 09-10-2019 ರಲ್ಲಿ ಕ್ರಮ ಸಂಖ್ಯೆ: 65 ರಿಂದ 83 ರವರೆಗಿನ ಅಧೀಕ್ಷಕರುಗಳಿಗೆ ಮುಂದೆ ವಿವಿಧ ಕಾರಣಗಳಿಂದ ಉದ್ಭವವಾಗುವ ಖಾಲಿ ಹುದ್ದೆಗಳಿಗೆ ಅನುಸಾರವಾಗಿ ಖಾಲಿಯಾಗುವ ದಿನಾಂಕದ ನಂತರ ಮುಂಬಡ್ತಿ ನೀಡಲು ತೀರ್ಮಾನಿಸಿರುವಂತೆ ಪ್ರಸ್ತುತ, ಬೆಂಗಳೂರು ಆಯುಕ್ತಾಲಯದಲ್ಲಿ ಪತ್ರಾಂಕಿತ ವ್ಯವಸ್ಥಾಪಕರ/ಸಹಾಯಕ ನಿರ್ದೇಶಕರು [ಬೋಧಕೇತರ] ಹುದ್ದೆಗಳು ಖಾಲಿ ಇದ್ದು, ಬಡ್ತಿ ಹೊಂದಿದ ಅಧಿಕಾರಿಗಳಿಗೆ ದಿನಾಂಕ:04-05-2020 ರಂದು ಸ್ಥಳ ಆಯ್ಕೆಗಾಗಿ ಕೌನ್ಸಿಲಿಂಗ್ ನಡೆಸಲಾಗಿದೆ. ಅದರಂತೆ, ಬಡ್ತಿ ಹೊಂದಿದ ಅಧಿಕಾರಿಗಳು ಅವರ ಹೆಸರಿನ ಮುಂದೆ ಸೂಚಿಸಿರುವ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಈ ಅಧಿಕಾರಿಗಳು ಸ್ಥಳ ಆಯ್ಕೆ ಮಾಡಿಕೊಂಡಿರುವಂತೆ, ಸ್ಥಳ ನಿಯುಕ್ತಿಗೊಳಿಸಿ ಆದೇಶವನ್ನು ಹೊರಡಿಸಿದೆ. ಬಡ್ತಿ ಹೊಂದಿದ ಅಧಿಕಾರಿಗಳು ಸ್ಥಳ ನಿಯುಕ್ತಿಗೊಳಿಸಿರುವ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಆರ್ಥಿಕ ಸೌಲಭ್ಯಕ್ಕೆ ಅರ್ಹರಾಗುತ್ತಾರೆ.

ಸ್ಥಾನಪನ್ನ ಬಡ್ತಿಯನ್ನು ಹೊಂದಿರುವ ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರು (ಬೋಧಕೇತರ) ಈ ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಯಿಂದ ಬಿಡುಗಡೆಯಾಗಿ, ಬಡ್ತಿಯನ್ನು ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಕಛೇರಿಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಈ ಮೂಲಕ ಆದೇಶಿಸಲಾಗಿದೆ. ತಪ್ಪಿದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

| ಕ್ರಸಂ | ಜೇಷ್ಠತಾ ಸಂಖ್ಯೆ | ನೌಕರರ ಹೆಸರು/ಕಛೇರಿ ವಿಳಾಸ ಶ್ರೀ / ಶ್ರೀಮತಿ | ಬಡ್ತಿ ಹುದ್ದೆಯಲ್ಲಿ ಆಯ್ಕೆ ಮಾಡಿಕೊಂಡ ಸ್ಥಳ |
|---|---|---|---|
| 01 | 402 | ಶ್ರೀ ಯು.ವಿ. ಕಿಶೋರ್ ಕುಮಾರ್, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಎನ್.ಆರ್.ಪುರ. ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

[ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟಿದೆ.]

(ಸಿರಿಯಣ್ಣನವರ್ ಲಲಿತ ಚಂದ್ರಶೇಖರ್]
ಜಂಟಿನಿರ್ದೇಶಕರು (ಆಡಳಿತ) (ಪ್ರಭಾರ)

ಇವರಿಗೆ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ Ink Signed Copy.
3) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ,
4) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು. ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ.
5) ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು.
6) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ. ಮತ್ತು ದಕ್ಷಿಣ ಕನ್ನಡ ಜಿಲ್ಲೆ.
7) ಈ ಕಛೇರಿಯ ಸಂಬಂಧಿಸಿದ ಶಾಖಾಧಿಕಾರಿಗಳಿಗೆ,
8) ಕ್ಷೇತ್ರ ಶಿಕ್ಷಣಾಧಿಕಾರಿ, ಎನ್.ಆರ್.ಪುರ. ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಮತ್ತು ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
9) ಈ ಅಧಿಸೂಚನೆಯನ್ನು ಇಲಾಖಾ ವೆಬ್ ಸೈಟ್–www.schooleducation.kar.in "ನಲ್ಲಿ ಪ್ರಕಟಿಸಲಾಗಿದೆ.
10) ಶ್ರೀ ಯು.ವಿ. ಕಿಶೋರ್ ಕುಮಾರ್, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
11) ಕಛೇರಿ ಪ್ರತಿ.

d:\manager promoton order-2019-20.doc